(106)

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 67 ಆರ್‌ಟಿಐ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ಬೆಂಗಳೂರು, ದಿನಾಂಕ 06.08.2013

**ಸುತ್ತೋಲೆ**

ವಿಷಯ: ಇಲಾಖೆಗಳಲ್ಲಿ ಪ್ರತ್ಯೇಕ ಮಾಹಿತಿ ಹಕ್ಕು ಕೋಶವನ್ನು ಸ್ಥಾಪಿಸುವ ಬಗ್ಗೆ.
ಉಲ್ಲೇಖ: ಸಮಸಂಖ್ಯೆ: ಸುತ್ತೋಲೆ ದಿನಾಂಕ: 16.06.2012

---

ಮಾಹಿತಿ ಹಕ್ಕು ಅಧಿನಿಯಮ, 2005ರ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ದಿನಾಂಕ 19.05.2012ರಂದು ನಡೆದ ಸರ್ಕಾರದ ಉನ್ನತ ಮಟ್ಟದ ಸಮಿತಿಯ ಸಭೆಯ ನಡವಳಿಗಳ ಕಂಡಿಕೆ 17ರಲ್ಲಿನ ತೀರ್ಮಾನದಂತೆ ತಮ್ಮ ಇಲಾಖೆಯಲ್ಲಿ ಪ್ರತ್ಯೇಕ ಮಾಹಿತಿ ಹಕ್ಕು ಕೋಶಗಳನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಿ, ಈ ಸಂಬಂಧ 50,000/- ರೂಗಳನ್ನು ಮಂಜೂರು ಮಾಡಲು ಕೇಂದ್ರ ಸರ್ಕಾರದೊಡನೆ ವ್ಯವಹರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಲಾಗಿತ್ತು, ಈ ಕುರಿತಾಗಿ ಹಲವಾರು ಇಲಾಖೆಗಳು ಹೆಚ್ಚಿನ ಸ್ಪಷ್ಟೀಕರಣ ಕೋರಿದ್ದರಿಂದ ಕೆಳಗಿನಂತೆ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

ಯಾವುದೇ ಇಲಾಖೆಯು ಸ್ವೀಕರಿಸುವ ಒಟ್ಟು ಸ್ವೀಕೃತಿಗಳಲ್ಲಿ ಪ್ರತಿಶತ ಹತ್ತರಷ್ಟು (10%) ಅಥವಾ ಅದಕ್ಕಿಂತ ಹೆಚ್ಚಿನ ಮನವಿಗಳು ಮಾಹಿತಿ ಹಕ್ಕು ಮನವಿಗಳಾಗಿದ್ದಲ್ಲಿ ಮಾತ್ರ ಅಂತಹ ಇಲಾಖೆಗಳಲ್ಲಿ ಮಾಹಿತಿ ಕೋಶವನ್ನು ಸ್ಥಾಪಿಸಿ, ಅಲ್ಲಿ ಸಾರ್ವಜನಿಕರಿಂದ ಬರುವ ಎಲ್ಲಾ ಮಾಹಿತಿ ಕೋರಿಕೆ ಅರ್ಜಿಗಳನ್ನು ಸ್ವೀಕರಿಸಿ ಸ್ವೀಕೃತಿ ನೀಡಬೇಕು ಮತ್ತು ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ಗಣಕಯಂತ್ರದ ಮೂಲಕ ನೊಂದಾಯಿಸಿಕೊಂಡು ಕ್ರಮಸಂಖ್ಯೆ ನೀಡಿ,ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಕಳುಹಿಸಬೇಕು. ಈ ಬಗ್ಗೆ ಅನುದಾನವನ್ನು ನೇರವಾಗಿ ಕೇಂದ್ರ ಸರ್ಕಾರದ ಡಿಓಪಿಟಿಗೆ ಪ್ರಸ್ತಾವನೆ ಸಲ್ಲಿಸಿ ಮುಂದಿನ ಕ್ರಮವಹಿಸಬಹುದಾಗಿದೆ.

ಹೆಚ್. ಬಿ. ಪ್ರಫುಲ್ಲವತಿ 6/8/13
(ಹೆಚ್.ಬಿ.ಪ್ರಫುಲ್ಲವತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ ಕೋಶ)

ಇವರಿಗೆ,

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು,
2. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
3. ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4. ಎಲ್ಲಾ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ಗಳು